ಓ.ಎಸ್. ನಂ. 43/2023 ಪಿ.ಡಬ್ಲ್ಯೂ- 1

**ಸಾಕ್ಷಿಯನ್ನು ದಿನಾಂಕ 9.1.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್.ಕೆ.ಜಿ ವಕೀಲರಿಂದಃ**

ದಾವಆಸ್ತಿಯು 1 ನೇ ಪ್ರತಿವಾದಿಗೆ ಪಿತ್ರಾರ್ಜಿತ ಆಸ್ತಿ ಎಂದರೆ ಇರಬಹುದು. 1 ನೇ ಪ್ರತಿವಾದಿಯ ಸಹೋದರಿಯರು ದಾವಆಸ್ತಿಯನ್ನು ಸೇರಿದಂತೆ ಉಳಿದ ಪಿತ್ರಾರ್ಜಿತ ಆಸ್ತಿಯ ವಿಭಾಗಕ್ಕಾಗಿ ಇದೇ ನ್ಯಾಯಾಲಯದಲ್ಲಿ ಓ.ಎಸ್ 134/2021 ರಂತೆ ದಾವೆ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ1 ರ ಒಂದು ವರ್ಷದ ಹಿಂದೆಯೇ ಸದರಿ ದಾವೆಯನ್ನು ದಾಖಲಿಸಿದ್ದು ಅದರಲ್ಲಿ ಆಸ್ತಿಗಳನ್ನು ಮಾರಾಟ ಮಾಡಬಾರದೆಂದು ನಿರ್ಬಂಧಕಾಜ್ಞೆ ಅದೇಶವಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ನಿರ್ಬಂಧಕಾಜ್ಞೆ ಆದೇಶ ನೋಂದಣಿ ಕಛೇರಿಯಲ್ಲಿರುವ ರಿಜಿಸ್ಟರಿನಲ್ಲಿರುವ ನಮೂದಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಓ.ಎಸ್ 134/2021 ರಲ್ಲಿ ನಾನು ವಕೀಲರ ಮೂಲಕ ಹಾಜರಾಗಿರುತ್ತೇನೆ ಎಂದರೆ ಸಾಕ್ಷಿದಾರರು ಕರಾರುಪತ್ರವಾದ ನಂತರ ಹಾಜರಾಗಿರುತ್ತೇನೆ ಎನ್ನುವರು. ಸದರಿ ದಾವೆಯಲ್ಲಿ ನಾನು ತಕರಾರು ಸಲ್ಲಿಸಿರುತ್ತೇನೆ ಎಂದರೆ ತಕರಾರು ಸಲ್ಲಿಸಿರುವುದಿಲ್ಲ ಎನ್ನುವರು. ಈಗ ನನಗೆ ಸದರಿ ದಾವೆಯ ವಿಚಾರ ಗೊತ್ತಿರುತ್ತದೆ. ನಾನು ಕರಾರುಪತ್ರವನ್ನು 6 ತಿಂಗಳವರೆಗೆ ಮಾಡಿಕೊಂಡಿರುತ್ತೇನೆ. 6 ತಿಂಗಳ ಒಳಗೆ ಪ್ರತಿವಾದಿಗೆ ನೋಟಿಸ್ ನೀಡಿರುತ್ತೀರಾ ಎಂದರೆ ಸಾಕ್ಷಿದಾರರು ಜೂನ್ 2022 ರಲ್ಲಿ ಸಾರ್ವಜನಿಕ ನೋಟಿಸನ್ನು ದಿನಪತ್ರಿಕೆಯಲ್ಲಿ ನೀಡಿರುತ್ತೇನೆ ಎನ್ನುವರು. ಪ್ರತಿವಾದಿಯರು ನನಗೆ ದಿನಾಂಕ 17.2.2023 ರಂದು ಬೆಳಿಗ್ಗೆ 10.25 ಗಂಟೆಗೆ ಅಂಚೆ ಮೂಲಕ ನೋಟಿಸನ್ನು ಕಳುಹಿಸಿರುತ್ತಾರೆ ಎಂದರೆ ಸಾಕ್ಷಿದಾರರು ಎರಡು ದಿನದ ನಂತರ ನನಗೆ ತಲುಪಿರುತ್ತದೆ ಎನ್ನುವರು. ಪ್ರತಿವಾದಿಯರು ನನಗೆ ನೋಟಿಸ್ ಕಳುಹಿಸಿರುವ ವಿಚಾರ ಗೊತ್ತಾಗಿ ದಿನಾಂಕ 17.2.2023 ರಂದು ಸಂಜೆ 6.55 ಗಂಟೆಗೆ ನಾನು ಪ್ರತಿವಾದಿಯರಿಗೆ ನೋಟಿಸನ್ನು ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ5 ರಂತೆ ಪ್ರತಿವಾದಿಯರಿಗೆ ನೋಟಿಸ್ ನೀಡುವ ಪೂರ್ವದಲ್ಲಿ ಅವರಿಗೆ ಬೇರೆ ಯಾವುದೇ ನೋಟಿಸನ್ನು ನೀಡಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಯರು ನನಗೆ ನೀಡಿರುವ ನೋಟಿಸನ್ನು ನಾನು ಪಡೆದುಕೊಂಡಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈಗ ನೋಡುತ್ತಿರುವ ನೋಟಿಸಿನ ಪ್ರತಿಯು ಪ್ರತಿವಾದಿಯರು ನನಗೆ ಕಳುಹಿಸಿರುವ ನೋಟಿಸ್ ಆಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಅದನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಡಿ1 ಎಂದು ಗುರುತಿಸಲಾಯಿತು. ಸದರಿ ನೋಟಿಸಿಗೆ ನಾನು ದಿನಾಂಕ 21.2.2023 ರಂದು ಉತ್ತರ ನೀಡಿರುತ್ತೇನೆ ಎಂದರೆ ಸರಿ. ಈಗ ನೋಡುತ್ತಿರುವ ದಾಖಲೆಯು ಸದರಿ ಉತ್ತರವಾಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಅದನ್ನು ನೋಡಿ ಒಪ್ಪಿದ್ದರಿಂದ

ಅದನ್ನು ನಿಡಿ2 ಎಂದು ಗುರುತಿಸಲಾಯಿತು. ನಾನು ವಕೀಲರ ಮೂಲಕ ಪ್ರತಿವಾದಿಯರಿಗೆ ನೀಡಿರುವ ನೋಟಿಸಿಗೆ ಅವರು ನಿಪಿ11 ರಂತೆ ಉತ್ತರ ನೀಡಿರುತ್ತಾರೆ ಎಂದರೆ ಸರಿ. ಈಗ ನೋಡುತ್ತಿರುವ ಪೋಸ್ಟಲ್ ಕವರ್ ನನ್ನ ವಕೀಲರು 1ನೇ ಪ್ರತಿವಾದಿಗೆ ಕಳುಹಿಸಿರುವ ವಕೀಲರ ನೋಟಿಸಿನ ಪೋಸ್ಟಲ್ ಕವರ್ ಆಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಅದನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಡಿ3 ಎಂದು ಗುರುತಿಸಲಾಯಿತು. ಸದರಿ ನೋಟಿಸನ್ನು ನನ್ನ ವಕೀಲರು ದಿನಾಂಕ 17.2.2023ರಂದು ಸಂಜೆ 6.55 ಗಂಟೆಗೆ ಕಳುಹಿಸಿರುವ ಬಗ್ಗೆ ನಿಡಿ3ರಲ್ಲಿ ನಮೂದಾಗಿರುತ್ತದೆ ಎಂದರೆ ಇರಬಹುದು.

ನಿಡಿ1 ನೋಟಿಸಿನಲ್ಲಿರುವ ವಿಚಾರಗಳನ್ನು ನಾನು ತಿಳಿದುಕೊಂಡಿರುತ್ತೇನೆ. ಅದನ್ನು ತಿಳಿದುಕೊಂಡು ನಿಡಿ2ರಂತೆ ಪ್ರತ್ಯುತ್ತರವನ್ನು ನೀಡಿರುತ್ತೇನೆ ಎಂದರೆ ಸರಿ. ಪ್ರತಿವಾದಿಯರು ತಮ್ಮ ನೋಟಿಸಿನಲ್ಲಿ 6 ತಿಂಗಳ ಕಾಲಾವಧಿ ಮುಗಿದಿರುವ ಬಗ್ಗೆ ತಿಳಿಸಿರುತ್ತಾರೆ. ಈಗ ನೋಡುತ್ತಿರುವ ಕರಾರುಪತ್ರದ 3 ಪುಟಗಳಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿದಾರರು ಸದರಿ ದಾಖಲೆಯಲ್ಲಿರುವ ಸಹಿಗಳನ್ನು ಮತ್ತು ಅದರಲ್ಲಿರುವ ಅಂಶಗಳನ್ನು ನೋಡಿ ಒಪ್ಪಿದ್ದರಿಂದ ಸದರಿ ದಾಖಲೆಯನ್ನು ನಿಡಿ4 ಎಂದು, ಅದರಲ್ಲಿರುವ ಸಾಕ್ಷಿದಾರರ ಒಟ್ಟು 3 ಸಹಿಗಳನ್ನು ನಿಡಿ4 ಎ ಎಂದು ಗುರುತಿಸಲಾಯಿತು. ನಿಡಿ4 ದಾಖಲೆಯನ್ನು ಪತ್ರ ಬರಹಗಾರರ ಕಛೇರಿಯಲ್ಲಿ ತಯಾರಿಸಲಾಗಿರುತ್ತದೆ. ನಿಡಿ4ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುತ್ತದೆ. ನಿಡಿ4 ದಾಖಲೆ ಮತ್ತು ನಿಪಿ1 ಕರಾರುಪತ್ರವನ್ನು ಒಂದೇ ದಿನ ಒಂದೇ ಸಮಯದಲ್ಲಿ ತಯಾರಿಸಲಾಗಿರುತ್ತದೆ. ನಿಡಿ4 ಮತ್ತು ನಿಪಿ1 ದಾಖಲೆಗಳು ಪತ್ರ ಬರಹಗಾರರ ಕಛೇರಿಯಲ್ಲಿ ನನ್ನ ಸಮಕ್ಷಮ ತಯಾರಿಸಲಾಗಿರುತ್ತದೆ. ನಿಡಿ4 ದಾಖಲೆಯನ್ನು ಯಾವ ಉದ್ದೇಶಕ್ಕೆ ತಯಾರಿಸಿರುತ್ತೀರಿ ಎಂದರೆ ಸಾಕ್ಷಿದಾರರು ಎರಡು ದಾಖಲೆಯನ್ನು ತಯಾರಿಸಲು ನಾನು ಕಾರಣನಲ್ಲ ಎನ್ನುವರು. ಪ್ರತಿವಾದಿಯರೇ ನಿಡಿ4 ದಾಖಲೆಯನ್ನು ಸದರಿ ದಿನ ಮಾಡಿಸಿಕೊಂಡಿರುತ್ತಾರೆ. ನನ್ನ ಸಮ್ಮತಿಯಿಂದಲೇ ನಿಡಿ4 ದಾಖಲೆಯನ್ನು ತಯಾರಿಸಲಾಗಿರುತ್ತದೆ ಎಂದರೆ ಸಾಕ್ಷಿದಾರರು ನನ್ನ ವಿರೋಧವಿದ್ದರೂ ಸಹ ತಯಾರಿಸಿರುತ್ತಾರೆ ಎನ್ನುವರು. ನಿಡಿ4ರಲ್ಲಿ 83,25,000/- ಹಣ ಎಂದು ನಮೂದಾಗಿದ್ದು ನಿಪಿ1ರಲ್ಲಿ 30,00,000/- ಹಣ ಎಂದು ನಮೂದಾಗಿದ್ದು ಇವೆರಡಲ್ಲಿ ಯಾವುದು ನಿಜ ಎಂದರೆ ಸಾಕ್ಷಿದಾರರು ನಿಡಿ4ರಲ್ಲಿ ನಮೂದಿಸಿರುವ ಕರಾರಿನ ಮೊತ್ತ ನಿಜವಾಗಿರುತ್ತದೆ, ಆದರೆ ನನ್ನ ಬಳಿ ನಿಪಿ1 ದಾಖಲೆ ಮಾತ್ರ ಇದುದ್ದರಿಂದ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎನ್ನುವರು. ನಿಪಿ1 ದಾಖಲೆಯನ್ನು 30 ಲಕ್ಷಕ್ಕೆ ಯಾವ ಉದ್ದೇಶಕ್ಕೆ ಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿದಾರರು ನನ್ನ ವಿರೋಧವಿದ್ದರೂ ಪ್ರತಿವಾದಿಯರು ಮಾಡಿಕೊಂಡಿರುತ್ತಾರೆ ಎನ್ನುವರು.

(ಈ ಹಂತದಲ್ಲಿ ನಿಡಿ4 ನ್ನು ಗಮನಿಸಿದಾಗ ನಿಗದಿತ ಸ್ಟಾಂಪ್ ಡ್ಯೂಟಿ ಪಾವತಿಸದಿರುವುದರಿಂದ ಸ್ಟಾಂಪ್ ಡ್ಯೂಟಿಯನ್ನು ನಿರ್ಧರಿಸಬೇಕಾಗಿರುವುದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.